# ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು

## ಭಾಗ–4ಎ

**ಅನುಚ್ಛೇದ 51ಎ ಮೂಲಭೂತ ಕರ್ತವ್ಯಗಳು**

1976ನೇ ವರ್ಷದಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿಯನ್ನು ತಂದು ಹೊಸ ಅನುಚ್ಛೇದ 51ಎ ಸೇರಿಸುವ ಮೂಲಕ **ಭಾರತೀಯ ನಾಗರಿಕರು (ಪೌರರು) ಈ ಕೆಳಗಿನ ಕರ್ತವ್ಯಗಳನ್ನು ಪಾಲಿಸತಕ್ಕದೆಂದು ಘೋಷಿಸಲಾಗಿದೆ.**

(ಅ) ಸಂವಿಧಾನಕ್ಕೆ ಬದ್ಧನಾಗಿದ್ದು ಅದರ ಆದರ್ಶಗಳನ್ನು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಇವುಗಳನ್ನು ಗೌರವಿಸುವುದು;

(ಆ) ಸ್ವಾತಂತ್ರ್ಯಕ್ಕಾಗಿ ನಡೆದ ರಾಷ್ಟ್ರೀಯ ಹೋರಾಟಕ್ಕೆ ಸ್ಫೂರ್ತಿ ನೀಡಿದ ಉದಾತ್ತ ಆದರ್ಶಗಳನ್ನು ಗೌರವಿಸಿ ಅನುಸರಿಸುವುದು;

(ಇ) ಭಾರತದ ಸಾರ್ವಭೌಮತ್ವ ಏಕತೆ ಮತ್ತು ಅಖಂಡತೆ ಇವುಗಳನ್ನು ಎತ್ತಿ ಹಿಡಿಯುವುದು ಮತ್ತು ಸಂರಕ್ಷಿಸುವುದು;

(ಈ) ಕರೆ ಬಂದಾಗ ರಾಷ್ಟ್ರರಕ್ಷಣೆ ಮಾಡುವುದು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸುವುದು;

(ಉ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಭಿನ್ನತೆಗಳನ್ನು ಮೀರಿ ಭಾರತೀಯರೆಲ್ಲರಲ್ಲಿ ಸಾಮರಸ್ಯ ಮತ್ತು ಭ್ರಾತೃತ್ವ ಭಾವನೆಯನ್ನು ಪ್ರೋತ್ಸಾಹಿಸುವುದು ಮತ್ತು ಮಹಿಳೆಯರ ಘನತೆಗೆ ಕುಂದು ತರುವಂತಹ ಸಂಪ್ರದಾಯಗಳನ್ನು ತ್ಯಜಿಸುವುದು;

(ಊ) ನಮ್ಮ ಸಂಯುಕ್ತ ಸಂಸ್ಕೃತಿಯ ಶ್ರೀಮಂತ ಪರಂಪರೆಯನ್ನು ಗೌರವಿಸಿ ಸಂರಕ್ಷಿಸುವುದು;

(ಋ) ಅರಣ್ಯ, ಸರೋವರ, ನದಿ ಮತ್ತು ವನ್ಯಮೃಗ ಇವುಗಳನ್ನೊಳಗೊಂಡಂತೆ ನೈಸರ್ಗಿಕ ಪರಿಸರವನ್ನು ರಕ್ಷಿಸುವುದು, ಅದಕ್ಕೆ ಸುಧಾರಣೆ ತರುವುದು ಮತ್ತು ಜೀವಿಗಳ ಬಗ್ಗೆ ಅನುಕಂಪ ಹೊಂದಿರುವುದು;

(ೠ) ವೈಚಾರಿಕ ಮನೋಭಾವ, ಮಾನವೀಯತೆ ವೈಚಾರಿಕ ಮತ್ತು ಸುದಾರಣಾತ್ಮಕ ದೃಷ್ಟಿಯನ್ನು ಬೆಳೆಸುವುದು;

(ಎ) ಸಾರ್ವಜನಿಕ ಸ್ವತ್ತನ್ನು ಸಂರಕ್ಷಿಸುವುದು ಮತ್ತು ಹಿಂಸೆಯನ್ನು ಖಂಡಿಸುವುದು; ಮತ್ತು

(ಏ) ಎಲ್ಲಾ ಕ್ಷೇತ್ರಗಳಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಕಾರ್ಯ ಕಲಾಪಗಳ ಉತ್ಕೃಷ್ಟತೆಗಾಗಿ ವಿಶೇಷ ಪ್ರಯತ್ನ ಮಾಡಿ ಆ ಮೂಲಕ ರಾಷ್ಟ್ರವು ಸಾಧನೆಯ ಮೇಲ್ಮಟ್ಟಕ್ಕೇರುವಂತೆ ಮಾಡುವುದು;

(ಐ) ತಂದೆ–ತಾಯಿ ಅಥವಾ ಪೋಷಕರು, ಸಂದರ್ಭಾನುಸಾರ ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ತಮ್ಮ ಮಗುವಿಗೆ ಅಥವಾ ತಮ್ಮ ಪರಿಪಾಲಿತ ಮಗುವಿಗೆ ಶಿಕ್ಷಣ ಪಡೆಯಲು ಅವಕಾಶಗಳನ್ನು ಒದಗಿಸುವುದು.

**ಈ ಮೂಲಭೂತ ಕರ್ತವ್ಯಗಳನ್ನು ಪಾಲಿಸದಿದ್ದರೆ?**

ಸಂವಿಧಾನ ಕೊಡ ಮಾಡಿದ ಮೂಲಭೂತ ಹಕ್ಕುಗಳನ್ನು ಅನುಭವಿಸುವ ಎಲ್ಲರೂ ಈ ಮೂಲಭೂತ ಕರ್ತವ್ಯಗಳನ್ನು ಪಾಲಿಸುವುದು ಆದ್ಯ ಕರ್ತವ್ಯವಾದರೂ ಈ ಕರ್ತವ್ಯಗಳನ್ನು ಉಲ್ಲಂಘಿಸುವುದು ಶಿಕ್ಷಾರ್ಹ ಅಪರಾಧ ಎಂಬುದಾಗಿ ಸಂವಿಧಾನ ಘೋಷಿಸಿರುವುದಿಲ್ಲ. ಆದಾಗ್ಯೂ **1971ರ ರಾಷ್ಟ್ರೀಯ ಗೌರವಕ್ಕೆ ಅಪಮಾನ ತಡೆ ಅಧಿನಿಯಮದಡಿಯಲ್ಲಿ–**

(1) ರಾಷ್ಟ್ರಧ್ವಜ ಮತ್ತು ಭಾರತೀಯ ಸಂವಿಧಾನ ಇವುಗಳನ್ನು ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕರು ವೀಕ್ಷಿಸಬಹುದಾದ ಬೇರೆ ಯಾವುದೇ ಸ್ಥಳದಲ್ಲಿ ಸುಡುವುದು, ವಿರೂಪಗೊಳಿಸುವುದು, ಅಪವಿತ್ರಗೊಳಿಸುವುದು, ನಾಶಗೊಳಿಸುವುದು ಮತ್ತು ಅವುಗಳ ನಿಂದನೆ ಮಾಡುವುದು ಮುಂತಾದ ಕೃತ್ಯಗಳನ್ನು **ಶಿಕ್ಷಾರ್ಹವಾದ ಅಪರಾಧಗಳೆಂದು** ಘೋಷಿಸಲಾಗಿದೆ.

(2) ಹಾಗೆಯೇ ರಾಷ್ಟ್ರಗೀತೆ ಹಾಡುವುದನ್ನು ತಡೆಯುವುದು ಅಥವಾ ರಾಷ್ಟ್ರಗೀತೆ ಹಾಡುವ ಸಭೆಯಲ್ಲಿ ಶಾಂತಿ ಭಂಗವನ್ನುಂಟುಮಾಡುವುದು ಕೂಡಾ **ಶಿಕ್ಷಾರ್ಹ ಅಪರಾಧವೆಂದು** ಸದರಿ ಅಧಿನಿಯಮ ಘೋಷಿಸಿದೆ.

****